UNIVERSITY LIBRARY
Agri Newspaper Clippings
Friday 01-08-2025
For more information visit University Library Website
Web - uasbagrilibindia.org
E-mail- librarian@uasbangalore.edu.in

ಅನುದಾನ 6520 ಕೋಟಿ ರೂ.ಗೆ ಹೆಚ್ಚಳಕ್ಕೆ ಅಸ್ತು

ಕಿಸಾನ್ ಸಂಪದ ಅನುದಾನ ಹೆಚ್ಚಳಕ್ಕೆ ಸಂಪುಟ ಅನುಮತಿ

ನವದೆಹಲಿ: ಆಹಾರ ವಲಯಕ್ಕೆ ಉತ್ತೇಜನ ನೀಡಲು ಪಿಎಂ ರೈತ ಸಂಪದ ಯೋಜನೆಯ ಬಜೆಟ್ ಅನುದಾನವನ್ನು 1920 ಕೋಟಿ ರೂ.ನಿಂದ 6520 ಕೋಟಿ ರೂ.ಗೆ ಹೆಚ್ಚಿಸಲು ಕೇಂದ್ರ ಸಚಿವ ಸಂಪುಟ ತೀರ್ಮಾನಿಸಿದೆ.

ಹೊಸದಾಗಿ ನಿರ್ಮಾಣ ಮಾಡಲು ಯೋಜಿಸಿರುವ 50 ಬಹು- ಉತ್ಪನ್ನ ಸಂಸ್ಕರಣಾ ಘಟಕ ಮತ್ತು 100 ಆಹಾರ ಪರೀಕ್ಷಾ ಪ್ರಯೋಗಾಲಯಗಳಿಗೆ ಈ ಮೊತ್ತ ಬಳಸಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಇದಲ್ಲದೇ, ರಾಷ್ಟ್ರೀಯ ಸಹಕಾರಿ ನಿಗಮಕ್ಕೆ 2000 ಕೋಟಿ ರೂ. ಅನುದಾನ ನೀಡಲು ಸಹ ಒಪ್ಪಿಗೆ ನೀಡಲಾಗಿದೆ. 2025ರಿಂದ 2029ರವರೆಗೆ ಈ ಅನುದಾನ ನೀಡಲಿದ್ದು, ಪ್ರತಿ ವರ್ಷ 500 ಕೋಟಿ ರೂ. ನಿಗದಿಪಡಿಸಲಾಗಿದೆ.



■ ಎನ್‌ಸಿಡಿಸಿಗೆ 2000 ಕೋಟಿ ರೂ. ಅನುದಾನ

ನಿಗಮವು ಈ ಮೊತ್ತವನ್ನು ದೇಶದ ಸಹಕಾರಿ ಸೊಸೈಟಿಗಳಿಗೆ ಸಾಲ ನೀಡಲು ಬಳಸಲಿದೆ.

6 ರಾಜ್ಯಕ್ಕೆ ರೈಲು ಯೋಜನೆ: 6 ರಾಜ್ಯಗಳ 13 ಜಿಲ್ಲೆಗಳಲ್ಲಿ ರೈಲು ಬಹು ಹಳಿ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ. ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ ಮತ್ತು ಜಾರ್ಖಂಡ್‌ಗಳಿಗೆ ಯೋಜನೆ ಅನ್ವಯವಾಗಲಿದೆ ಎಂದಿದ್ದಾರೆ.

01-08-2025
Udaya Vani pg.09



ಬಿತ್ತನೆ ಬೀಜೋಪಚಾರದಿಂದ ಹಲವು ರೋಗಗಳ ತಡೆ ಸಾಧ್ಯ

ರೈತರಿಗೆ ಜಾಗೃತಿ ಮೂಡಿಸುವ ಕೃಷಿ ಕಾರ್ಯಾಗಾರ

ಸಂ.ಕ. ಸಮಾಚಾರ, ಮಾಗಡಿ

ಬೀಜೋಪಚಾರ ಎಂಬುದು ಹೊಸ ವಿಷಯ ಅಲ್ಲ, ಆದರೆ ಹಲವು ವರ್ಷಗಳಿಂದ ರೈತರು ಇದನ್ನು ತಾತ್ಸರ ಮಾಡುತ್ತಿದ್ದಾರೆ ಎಂದು ಕೃಷಿ ವಿಶ್ವವಿದ್ಯಾಲಯ ಜಿ.ಕೆ.ವಿ.ಕೆ. ವಿದ್ಯಾರ್ಥಿ ದೀಕ್ಷಿತ್ ಹೇಳಿದರು.

ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ. ಬೆಂಗಳೂರು ಇವರ ವತಿಯಿಂದ ತಾಲೂಕಿನ ಹಾಲಶೆಟ್ಟಿಹಳ್ಳಿ ಗ್ರಾಮದಲ್ಲಿ ಏರ್ಪಡಿಸಿದ್ದ ಬಿತ್ತನೆ ಬೀಜೋಪಚಾರದ ಪ್ರಾಮುಖ್ಯತೆ, ಮಾಡುವ ವಿಧಾನ ಹಾಗೂ ಉಪಯೋಗಗಳನ್ನು ರೈತರಿಗೆ ತಿಳಿಸಿ ಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೀಜೋಪಚಾರದಿಂದ ನಾವು ಬೀಜದಿಂದ ಉಂಟಾಗುವ ಹಲವಾರು ರೋಗಗಳಾದ ಸೋರಗು ರೋಗ, ಬೀಜ ಕೊಳೆಯುವಿಕೆ ಮುಂತಾದ ರೋಗಗಳನ್ನು ತಡೆಗಟ್ಟಬಹುದು, ಇದಲ್ಲದೇ ಸೂಕ್ಷ್ಮ ಜೀವಿಗಳಿಂದ ಜೈವಿಕ ಗೊಬ್ಬರ, ಅಜೋಸ್ಪೈರಿಲಂ, ರೈಜೋಬಿಯಂ, ಮುಂತಾದ ಬೀಜೋಪಚಾರ ಮಾಡಿದರೆ ಬೆಳೆಗೆ ಬೇಕಾದ ಸಾರಜನಕವನ್ನು ಶೇ. 20 ರಿಂದ 30 ರಷ್ಟು ಕಮ್ಮಿ ಮಾಡಬಹುದು ಎಂದು ದೀಕ್ಷಿತ್ ಹೇಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ಹರೀಶ್, ಅಮೃತ, ಅಶ್ವಿನಿ ಜಾಲೀನ್, ಅಕ್ಷತ, ಗ್ರಾಮಸ್ಥರಾದ ರೇವಣ್ಣ, ಚನ್ನವೀರಯ್ಯ, ನಿರಂಜನ್, ಕುಮಾರ್, ಮಹೇಶ್ ಸೇರಿದಂತೆ ಮತ್ತಿತರರು ಇದ್ದರು.

01-08-2025
Samyuktha Kar. Pg.06

ಅಕ್ಕಿ ಆಮದಿಗೆ ಮುಂದಾದ ಬಾಂಗ್ಲಾದೇಶ | ಭಾರತೀಯ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಏರಿಕೆ | ಗ್ರಾಹಕರಿಗೆ ಬಿಸಿ

ಭಾರತದ ಭತ್ತ ಬೆಳೆಗಾರರಿಗೆ ಈಗ ಶುಕ್ರದೆಸೆ

ಹೊಸದಿಲ್ಲಿ: ನೆರೆಯ ಬಾಂಗ್ಲಾದೇಶವು 9 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಆಮದು ಮಾಡಿಕೊಳ್ಳಲು ಮುಂದಾಗಿರುವ ಬೆನ್ನಲ್ಲಿಯೇ ಭಾರತದಲ್ಲಿ ಅಕ್ಕಿ ಬೆಲೆ ಏರತೊಡಗಿದೆ. ಇದರಿಂದ ಬೆಳೆಗಾರರಿಗೆ ಖುಷಿಯಾದರೆ, ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ಅನುಭವಿಸುವಂತಾಗಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಬಾಸ್ಮತಿ ಅಲ್ಲದ ತಳಿಗಳ ಅಕ್ಕಿ ಬೆಲೆ ಏರುತ್ತಿದೆ. ಬಾಂಗ್ಲಾದೇಶಕ್ಕೆ ರಫ್ತಾಗುವ ಅಕ್ಕಿ ಪೈಕಿ ಭಾರತ ಶೇ.40ರಷ್ಟು ಪಾಲನ್ನು ಹೊಂದಿದೆ. ಸ್ಪರ್ಧಾತ್ಮಕ ಬೆಲೆ ಹಾಗೂ ಅನುಕೂಲಕರ ಸಾಗಣೆ ವ್ಯವಸ್ಥೆಯಿಂದ ಕಡಿಮೆ ಬೆಲೆಯ ಸುವರ್ಣ, ಮಿನಿಕೆಟ್ ಮತ್ತು ಸೋನಾಮಸೂರಿಗೆ ಹೆಚ್ಚು ಬೇಡಿಕೆ ಇದೆ.

ಇತ್ತೀಚಿನ ವಾರಗಳಲ್ಲಿ ಚಿಲ್ಲರೆ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಶೇ.8-10ರಷ್ಟು ಏರಿಕೆ ಕಂಡಿದೆ. ಬಾಂಗ್ಲಾದಲ್ಲಿ ಬಳಸುವ ಬಳಸುವ ತಳಗಳ ಅಕ್ಕಿ ಬೆಲೆ ಎರಡು ವಾರಗಳಲ್ಲಿ ಶೇ 7ರಿಂದ ಶೇ. 14ರಷ್ಟು ಏರಿದೆ. ಪ್ರತಿ ಕೆ.ಜಿ ಗೆ ಸರಾಸರಿ 32 ರೂ. ಇದ್ದದ್ದು 45 ರೂ.ಆಗಿದೆ ಎಂದು ಬಾಂಗ್ಲಾ ಅಕ್ಕಿ ರಫ್ತು ಮಾಡುವ ಪ್ರಮುಖ ಕಂಪನಿ ವಿಲ್ಮಾ ಗ್ರೂಪ್‌ನ ಸಿಇಒ ಸೂರಜ್ ಅಗರ್ವಾಲ್ ಹೇಳಿದ್ದಾರೆ.

''ಭತ್ತದ ಬಂಪರ್ ಇಳುವರಿ ಹಾಗೂ ಬಾಂಗ್ಲಾಗೆ ಕ್ಷಿಪ್ರವಾಗಿ



ಪೂರೈಕೆ ಮಾಡಲು ನಮಗಿರುವ ಅವಕಾಶ ಬೇರೆ ದೇಶಗಳಿಗೆ ಇಲ್ಲ. ಅವರಿಗೆ ಬೇಕಾದ ಪ್ರಮಾಣದಲ್ಲಿ ಪೂರೈಸುವ ಬಲ ನಮಗಿದೆ,'' ಎಂದು ಅಕ್ಕಿ ರಫ್ತುದಾರರ ಸಂಘದ ಅಧ್ಯಕ್ಷ ಪಿ. ಕೃಷ್ಣರಾವ್ ತಿಳಿಸಿದ್ದಾರೆ.

ಯಾವ ರಾಜ್ಯದಿಂದ ಎತ್ತುವಳಿ?: ಬಾಂಗ್ಲಾದೇಶದ ಸರಕಾರಿ ಸಂಸ್ಥೆಗಳು 4 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಆಮದು ಮಾಡಿಕೊಳ್ಳಲಿದ್ದು, ಹಾಸಗಿ ಆಮದುದಾರರಿಗೆ 5 ಮೆಟ್ರಿಕ್ ಟನ್ ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಆಮದು ಸಂಬಂಧ ಬಾಂಗ್ಲಾದೇಶ ಸರಕಾರ ಜಾಗತಿಕ ಟೆಂಡರ್ ಕರೆದಿದೆ. ಮುಂದಿನ ತಿಂಗಳು ಬಿಡ್ ತೆರೆದ ಬಳಿಕ

ಅಕ್ಕಿ ರಫ್ತು ತಾತ್ಕಾಲಿಕ ಅಡಚಣೆ

ಅಕ್ಕಿ ಸೇರಿದಂತೆ ಭಾರತೀಯ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಶೇ.25 ರಷ್ಟು ಸುಂಕವು 'ತಾತ್ಕಾಲಿಕ ಅಡಚಣೆ' ಮತ್ತು ಈ ವಲಯಕ್ಕೆ ದೊಡ್ಡ ಅಡ್ಡಿಯಲ್ಲ ಎಂದು ಅಕ್ಕಿ ರಫ್ತುದಾರರ ಸಂಘ ಗುರುವಾರ ಹೇಳಿದೆ. 2024 ರ ಹಣಕಾಸು ವರ್ಷದಲ್ಲಿ ಸುಮಾರು 2.34 ಲಕ್ಷ ಟನ್ ಬಾಸ್ಮತಿ ಅಕ್ಕಿ ರಫ್ತು ಮಾಡಲಾಗಿತ್ತು. ಇದು ಒಟ್ಟು 52.4 ಲಕ್ಷ ಟನ್ ಜಾಗತಿಕ ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಸಣ್ಣ ಪಾಲಾಗಿದೆ.

ಭಾರತದಿಂದ ಎಷ್ಟು ಪ್ರಮಾಣದ ಅಕ್ಕಿ ರಫ್ತಾಗಲಿದೆ ಎನ್ನುವುದು ನಿಖರವಾಗಿ ತಿಳಿಯಲಿದೆ. ರಫ್ತುದಾರರಿಗೆ ಮುಂದಿನ ಆರು ವಾರಗಳವರೆಗೆ ಧಾನ್ಯವನ್ನು ಪೂರೈಸಲು ಅವಕಾಶ ನೀಡಲಾಗುವುದು. ಪಶ್ಚಿಮ ಬಂಗಾಳ, ಜಾರ್ಖಂಡ್, ಆಂಧ್ರಪ್ರದೇಶ, ಒಡಿಶಾ ಮತ್ತು ಬಿಹಾರಗಳಿಂದ ಮಿನಿಕೆಟ್ ಮತ್ತು ಸೋನಾ ಮಸೂರಿಯನ್ನು ಬಾಂಗ್ಲಾದೇಶಕ್ಕೆ ರವಾನಿಸುವ ಸಾಧ್ಯತೆಯಿದೆ.

ಬಾಂಗ್ಲಾದಲ್ಲೂ ಭಾರಿ ವರ್ಷಧಾರೆ: ಬಾಂಗ್ಲಾದೇಶವು ಸಾಮಾನ್ಯವಾಗಿ ಆಗಸ್ಟ್ ನಂತರ ಅಕ್ಕಿ ಆಮದನ್ನು ಪ್ರಾರಂಭಿಸುತ್ತದೆ. ಆದರೆ ಈ ಬಾರಿ ಅಲ್ಲಿ ಜುಲೈ ಅತಿಯಾದ ಮಳೆಯಾಗಿದೆ. ಅಲ್ಲದೆ ಆಗಸ್ಟ್‌ನಲ್ಲಿಯೂ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ. ಈಗ ಬಿತ್ತನೆ ಮಾಡಿ ನಿಂತಿರುವ ಬೆಳೆಗಳಿಗೆ ಹಾನಿ ಉಂಟುಮಾಡಬಹುದು ಎಂಬ ಆತಂಕದ ಹಿನ್ನೆಲೆಯಲ್ಲಿ ಅಕ್ಕಿ ಸಂಗ್ರಹ ಹೆಚ್ಚು ಮಾಡಿಕೊಳ್ಳುವ ಕ್ರಮಕ್ಕೆ ಮುಂದಾಗಿದೆ. ಬಾಂಗ್ಲಾದೇಶವು 2025 ರ ಹಣಕಾಸು ವರ್ಷದಲ್ಲಿ 10.3 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಆಮದು ಮಾಡಿಕೊಂಡಿದೆ. ಇದು 2018 ರ ಹಣಕಾಸು ವರ್ಷದಲ್ಲಿ ಆಮದು ಮಾಡಿಕೊಂಡ 9.7 ಲಕ್ಷ ಮೆಟ್ರಿಕ್ ಟನ್ ನಂತರ ಎರಡನೇ ಅತಿ ಹೆಚ್ಚು ಪ್ರಮಾಣವಾಗಿದೆ ಎಂದು ಆಹಾರ ಸಚಿವಾಲಯ ತಿಳಿಸಿದೆ.

ಸಂಕಷ್ಟ ಸೂತ್ರ: 2025ರ ಹಣಕಾಸು ವರ್ಷದಲ್ಲಿ ಬಾಸ್ಮತಿಯಲ್ಲದ ಒಟ್ಟು ಅಕ್ಕಿ ರಫ್ತು ಪ್ರಮಾಣ 14.13 ಲಕ್ಷ ಮೆಟ್ರಿಕ್ ಟನ್ ಇದೆ. ಇದರಲ್ಲಿ ಬಾಂಗ್ಲಾದೇಶದ ಪಾಲು ಶೇ. 5.5ರಷ್ಟಿದೆ. ಆಮದು ಪ್ರಮಾಣವನ್ನು ಗಮನಿಸಿ ಬಾಂಗ್ಲಾ ಬರಗಾಲದಲ್ಲಿದೆ ಎನ್ನಲಾಗದು. ಏಕೆಂದರೆ ಈ ದೇಶ ಕೂಡ ಜಾಗತಿಕ ಅಕ್ಕಿ ಉತ್ಪಾದಕನಾಗಿದ್ದು 2025-26ರ ಮಾರುಕಟ್ಟೆ ವರ್ಷದಲ್ಲಿ 37.55 ಮೆಟ್ರಿಕ್ ಟನ್ ಅಕ್ಕಿ ಉತ್ಪಾದನೆಯ ಗುರಿ ಹೊಂದಿದೆ. ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸುವ ಸಲುವಾಗಿ ಹಾಗೂ ಕಡಿಮೆ ಬೆಲೆ ಕಾರಣಕ್ಕೆ ಭಾರತದ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತದೆ.

01-08-2025
Vijaya Kar. Pg.05

ಶ್ರೀಗಂಧ ಬೆಳೆದ ಅನ್ನದಾತ ಈಗ ಅತಂತ್ರ

ಸರಕಾರವೂ ಖರೀದಿಸುತ್ತಿಲ್ಲ, ಖಾಸಗಿಯವರಿಗೆ ಮಾರಾಟ ಮಾಡುವ ಅವಕಾಶವೂ ಇಲ್ಲ

■ ವೆಂ.ಸುನೀಲ್ ಕುಮಾರ್ ಕೋಲಾರ
sunil.kumar14@timesofindia.com

ಕೋಲಾರ ಮತ್ತು ಚಿಕ್ಕಬಳ್ಳಾಪುರ ಅವಳಿ ಜಿಲ್ಲೆಗಳಲ್ಲಿ ಸರಕಾರದ ಮತ್ತು ನಂಬಿ ಬೆಳೆದಿರುವ ಶ್ರೀಗಂಧ ಮಾರಾಟ ಮಾಡಲಾಗದೇ, ಕಳ್ಳರಿಂದ ರಕ್ಷಿಸಿಕೊಳ್ಳೂ ಆಗದೇ ರೈತರು ಬವಣೆ ಪಡುತ್ತಿದ್ದಾರೆ.

50 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಮಾರಾಟ ಪ್ರಕ್ರಿಯೆ ಜಟಿಲವಾಗಿದ್ದು, ಮುಕ್ತ ಮಾರಾಟಕ್ಕೂ ಅವಕಾಶವಿಲ್ಲದೆ ರೈತರು ಶ್ರೀಗಂಧವನ್ನು ರಕ್ಷಿಸಿಕೊಳ್ಳಲು ಹೆಣಗಾಡುವಂತಾಗಿದೆ.

ಶ್ರೀಗಂಧ ಬೆಳೆಯಿರಿ, ಶ್ರೀಮಂತರಾಗಿ ಎಂದು ಸರಕಾರವೇ ರೈತರಿಗೆ ಪ್ರೋತ್ಸಾಹ ನೀಡಿತ್ತು. ಆದರಂತೆ ಕೋಲಾರ-ಚಿಕ್ಕಬಳ್ಳಾಪುರ ಸಾವಿರಾರು ರೈತರು ಸುಮಾರು 50 ಸಾವಿರ ಎಕರೆ ಪ್ರದೇಶದಲ್ಲಿ ಶ್ರೀಗಂಧ ಬೆಳೆದಿದ್ದು, ಕಳ್ಳರಿಂದ ರಕ್ಷಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಶ್ರೀಗಂಧದ ಮರಗಳಿಗೆ ಈಗ 15 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದ್ದು, ಕಟಾವಿಗೆ ಸೂಕ್ತ ಸಮಯ. ಆದರೆ, ರೈತರಿಂದ ಶ್ರೀಗಂಧ ಕೊಳ್ಳುವ ಹಾಗೂ ರೈತರಿಗೆ ತಮ್ಮ ಶ್ರೀಗಂಧವನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸುವ ನಿಟ್ಟಾರೆಯಲ್ಲಿ ಸರಕಾರ ಸೂಕ್ತ ಕ್ರಮಕ್ಕೆಗೊಂಡಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ರೈತರೇ ನೇರವಾಗಿ ಮಾರಾಟ ಮಾಡಲು ಕಾನೂನಿನಲ್ಲಿ ಪ್ರಕರಣಗಳು ನಿಂತಿಲ್ಲ. ಆರಂಭದಲ್ಲಿ ಅವಕಾಶವಿಲ್ಲ. ಇದರಿಂದ ರೈತರಿಗೆ ಸಿಗುಗನ್ನು ಕೊಟ್ಟು ಪೋಷಿಸಲು ಕೊಂದರೆ ಆಗಿದೆ.

ಕಳ್ಳರಿಂದ ರಕ್ಷಿಸಿಕೊಳ್ಳುವುದೇ ದುಸ್ತರ

ರೈತರಿಗೆ ಶ್ರೀಗಂಧ ಕಳ್ಳರು ದೊಡ್ಡ ತಲೆನೋವಾಗಿದ್ದಾರೆ. ಶ್ರೀಗಂಧ ಮರಗಳ ರಕ್ಷಣೆಗೆ ಸಿಸಿಟಿವಿ ಕ್ಯಾಮೆರಾ, ಬುಡದ ಸುತ್ತಲೂ ಬೇಲಿ ನಿರ್ಮಾಣ, ಸೋಲಾರ್ ಫೆನ್ಸಿಂಗ್ ಮಾಡಿದ್ದರೂ ಕಳ್ಳರು ಪ್ರತಿಯೊಬ್ಬರ ತೋಟಗಳಿಗೂ ಬಂದು ಉತ್ತೇಜನದ ಆರಣ್ಯ ಇಲಾಖೆ ಇದೀಗ ತಮಗೆ ಸಂಬಂಧವಿಲ್ಲದಂತೆ ವರ್ತಿಸುತ್ತಿದೆ ಎನ್ನುವುದು ಬೆಳೆಗಾರರ ಆಕ್ರೋಶ. ಆರಣ್ಯ ಇಲಾಖೆಯವರೂ ನೀವು ಬೆಳೆದ ಬೆಳೆಯನ್ನು ನೀವೇ ರಕ್ಷಿಸಿಕೊಳ್ಳಬೇಕು. ಕಾರಣವಾಗಿದೆ. ಮುಳಬಾಗಲು ಹಾಗೂ ಕಂಡುಬಂದಿದೆ.



ಸಂಗ್ರಹ ಚಿತ್ರ

ಕಳ್ಳರಿಂದ ಶ್ರೀಗಂಧ ರಕ್ಷಿಸಿಕೊಳ್ಳಲು ಸಹಾಯ ಮಾಡಿ: ಬೆಳೆಗಾರರ ಆಳಲು

■ ಸರಕಾರದ ಮಾತು ನಂಬಿ ಶ್ರೀಗಂಧ ಬೆಳೆದ ರೈತರಿಗೆ ಸೂಕ್ತ ಸ್ಪಂದನೆ ಇಲ್ಲ

ಕಳ್ಳರಿಂದ ಶ್ರೀಗಂಧ ರಕ್ಷಿಸಿಕೊಳ್ಳುವುದು ಸಹಜ ಪ್ರಕ್ರಿಯೆ. ಆದರೆ ಸರಕಾರವೇ ಬೆಳೆಗಾರರಿಗೆ ಕಿರುಕುಳ ನೀಡಲು ಸಾಧ್ಯವಿಲ್ಲ. ಶ್ರೀನಿವಾಸಪುರದಲ್ಲಿಯೇ ಹುಟ್ಟು ಪ್ರಕರಣಗಳು ವರದಿಯಾಗುತ್ತಿರುವುದು

ಶ್ರೀಗಂಧ ಸಂಗ್ರಹಕ್ಕೆ ಅನುಮತಿ ಕೊಡಿ!

ಆರಣ್ಯ ಇಲಾಖೆಯ ನಿಯಮಗಳಂತೆ ಒಬ್ಬ ವ್ಯಕ್ತಿ 4 ಕೆಜಿಯಷ್ಟು ಶ್ರೀಗಂಧ ಸಂಗ್ರಹಿಸಿಟ್ಟುಕೊಳ್ಳಲು ಅವಕಾಶವಿದೆ. ಬೆಳೆದ ಉತ್ತಮ ಮರಗಳನ್ನು ಕಳ್ಳರು ಬುಡದವರೆಗೆ ಕತ್ತರಿಸಿಕೊಂಡು ಹೋಗುತ್ತಿದ್ದು, ಕಳ್ಳರು ಬಿಟ್ಟುಹೋಗಿರುವ ಮರದ ರಂಬೆ-ಟೊಂಗೆಗಳನ್ನು ಮಾರೂ ಖರೀದಿಸುವುದಿಲ್ಲ. ಹೀಗಾಗಿ ಕೊಯಿಗೆ ಬಂದ ಶ್ರೀಗಂಧ ಮರಗಳನ್ನು ಕತ್ತರಿಸಿ, ದಾಸ್ತಾನು ಮಾಡಿಕೊಳ್ಳಲು ಸರಕಾರ ಅನುಮತಿ ಕೊಡಬೇಕು ಎಂಬುದು ರೈತರ ಒತ್ತಾಯವಾಗಿದೆ.

ರಕ್ಷಣೆ ಜವಾಬ್ದಾರಿ ಬೆಳೆಗಾರರದ್ದು!

ಶ್ರೀಗಂಧವು ಸರಕಾರದ ಆಸ್ತಿ, ಹೀಗಾಗಿ ಮುಕ್ತ ಮಾರಾಟಕ್ಕೆ ಅವಕಾಶವಿಲ್ಲ. ಕರ್ನಾಟಕ ಸಾಪೂನು ಮತ್ತು ಮಾರ್ಜಕ ನಿಯಮಿತದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವಕಾಶವಿದ್ದು ಆರಣ್ಯ ಇಲಾಖೆಯ ಅನುಮತಿ ಸಿಗುತ್ತದೆ. ದಾಖಲೆ ಇಲ್ಲದ ಜಿಲ್ಲೆಗಳಿಂದ ಬಂದ ಶ್ರೀಗಂಧವನ್ನು ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ. ಪ್ರಕ್ರಿಯೆ ನಿಯಂ ಎನ್ನುವ ಕಾರಣಕ್ಕೆ ಕೆಲವರು ತಾವೇ ಕಡಿದು ಕಳ್ಳರ ಮೇಲೆ ಆಪಾದ ಹಾಕುವ ಬಗ್ಗೆಯೂ ದೂರುಗಳಿವೆ ಎಂದು ಆರಣ್ಯ ಇಲಾಖೆಯ ಅಧಿಕಾರಿಯೊಬ್ಬರು ದೂರಿದ್ದಾರೆ.

ನಿಗದಿಯಾಗದ ಬೆಲೆ!

ಆರಣ್ಯ ಕಾಯಿದೆಯಂತೆ ಪ್ರತಿವರ್ಷ ಶ್ರೀಗಂಧಕ್ಕೆ ಚಿಲ್ಲರೆ ದರವನ್ನು ನಿಗದಿಪಡಿಸಬೇಕು. ಆದರಂತೆ 2021ರಲ್ಲಿ ಸೇರಿಸಿ ಕೆಜಿಗೆ 12,200 ರೂ. ನಿಗದಿಪಡಿಸಲಾಗಿದೆ. ಮರದ ಇತರೆ ಭಾಗಗಳಿಗೂ ಮೌಲ್ಯವನ್ನು ನಿಗದಿಪಡಿಸಲಾಗಿದೆ. ಆದರೆ, ಸರಕಾರ 2018 ಹಾಗೂ 2021ರಲ್ಲಿ ಮಾತ್ರವೇ ದರ ನಿಗದಿಪಡಿಸಿದ್ದು, ಈ ದರಗಳ ದರ ನಿಗದಿಪಡಿಸದೆ ಶ್ರೀಗಂಧ ಬೆಳೆಗಾರರಿಗೆ ಅನ್ಯಾಯ ಮಾಡುತ್ತಿದೆ ಎನ್ನುವುದು ಬೆಳೆಗಾರರ ಆಕ್ರೋಶವಾಗಿದೆ.

ರೈತರು ಆರಣ್ಯ ಇಲಾಖೆ ಅಥವಾ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತಕ್ಕೆ ಮಾರಾಟ ಮಾಡಲು ಅವಕಾಶವಿದೆ. ಟ್ರಾನ್ಸಿಟ್ ಪಾಸ್ ಮೂಲಕವೇ ಮರಗಳ ಮಾರಾಟಕ್ಕೆ ಅನುಮತಿ ನೀಡಲಾಗುತ್ತದೆ. ನಿರ್ದಿಷ್ಟ ಪ್ರಮಾಣದ ಶ್ರೀಗಂಧ ಬಂದ ಬಳಿಕವಷ್ಟೇ ಆರಣ್ಯ ಇಲಾಖೆಯಿಂದ ಹರಾಜು ಮಾಡಿ ರೈತರಿಗೆ ಹಣ ನೀಡಲಾಗುತ್ತದೆ.

-ಪರೀಕ್ಷಾ ಸಿಕ್ಕಲಿಗರ್
ಡಿಎಫ್ಒ, ಕೋಲಾರ

ಸರಕಾರ ನೀಡಿದ ಉತ್ತೇಜನದಿಂದಾಗಿ ಸಾವಿರಾರು ರೈತರು ಶ್ರೀಗಂಧವನ್ನು ಬೆಳೆದಿದ್ದಾರೆ. ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಆರಣ್ಯ ಸಚಿವರನ್ನು ಭೇಟಿಯಾಗಲು ಸತತವಾಗಿ ಪ್ರಯತ್ನಿಸಿದರೂ ಅವಕಾಶ ಸಿಗುತ್ತಿಲ್ಲ. ಇದರಿಂದಾಗಿ ಕಳ್ಳರ ಹಾವಳಿ ಹೆಚ್ಚಾಗಿದ್ದು, ಶ್ರೀಗಂಧ ಬೆಳೆದವರು ಬಡವರಾಗುತ್ತಿದ್ದಾರೆ. ಕಳ್ಳರು ಶ್ರೀಮಂತರಾಗುತ್ತಿದ್ದಾರೆ.

-ವೆಂಕಟೇಶ್‌ಗೌಡ, ಬೆಲ್ಲಾಪ್ಪಳ್ಳಿ
ಶ್ರೀಗಂಧ/ವನ್ಯಕೃಷಿ ಬೆಳೆಗಾರರ ಸಂಘ

01-08-2025
Vijaya Kar. Pg.10

ತೆಂಗಿನಕಾಯಿ ಬಲು ದುಬಾರಿ

ಎಪಿಎಂಸಿ ಮಾರುಕಟ್ಟೆಯಲ್ಲೇ ಕೆ.ಜಿ.ಗೆ 70ರಿಂದ 80 ರೂ.

ಸಂ.ಕ.ಸಮಾಚಾರ, ಬೆಂಗಳೂರು

ಶ್ರಾವಣಮಾಸ ಆರಂಭವಾಗಿದೆ. ಸಾಲುಸಾಲು ಹಬ್ಬಗಳು ಬಂದಿದ್ದು, ಈಗಾಗಲೇ ಭರದ ಸಿದ್ಧತೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಹಬ್ಬಕ್ಕೆ ಪ್ರಮುಖವಾಗಿ ಬೇಕಾದ ತೆಂಗಿನಕಾಯಿ ಬೆಲೆ ಗ್ರಾಹಕರ ಕೈ ಸುಡುವಂತಾಗಿದೆ.

ವರಮಹಾಲಕ್ಷ್ಮಿ, ಶ್ರೀ ಕೃಷ್ಣ ಜನ್ಮಾಷ್ಟಮಿ, ಗೌರಿ-ಗಣೇಶ ಹಬ್ಬ ಸೇರಿದಂತೆ ಶುಭ ಸಮಾರಂಭಗಳು ಒಂದರ ಹಿಂದೊಂದರಂತೆ ಬರುತ್ತಿದೆ. ಇದರಿಂದ ತೆಂಗಿನ ಕಾಯಿಗೆ ಬೆಲೆ ಬಂದಿದೆ. ಎಪಿಎಂಸಿ ಮಾರುಕಟ್ಟೆಯಲ್ಲೇ ತೆಂಗಿನಕಾಯಿ ಕೆ.ಜಿ.ಗೆ 70ರಿಂದ 80 ರೂ. ಇದೆ. ಇನ್ನು ಅಂಗಡಿಗಳಲ್ಲಿ ಚಿಲ್ಲರೆ ದರದಲ್ಲಿ 50ರಿಂದ 60 ರೂ.ಗೆ ಮಾರಾಟವಾಗುತ್ತಿದೆ. ಅದೂ ಸಣ್ಣ ಕಾಯಿಗಳಿಗೆ ಈ ದರ ನಿಗದಿ ಮಾಡಲಾಗಿದೆ.

ಹಬ್ಬದ ಸಂದರ್ಭದಲ್ಲಿ ತೆಂಗಿನಕಾಯಿ ಬೆಲೆ ಶತಕ ಮುಟ್ಟಬಹುದು ಎಂಬ ಹಿನ್ನೆಲೆಯಲ್ಲಿ ಕೆಲವರು ಈಗಲೇ ತೆಂಗಿನ ಕಾಯಿ ಖರೀದಿ ಮಾಡತೊಡಗಿದ್ದಾರೆ.

ಬೆಲೆ ಹೆಚ್ಚಳಕ್ಕೆ ಕಾರಣ: ತೆಂಗನ್ನು ಹೆಚ್ಚಾಗಿ ಬೆಳೆಯುವ ಪ್ರದೇಶಗಳಾದ ತುಮಕೂರು, ರಾಮನಗರ, ಹಾಸನ, ಅರಸೀಕೆರೆ ಸೇರಿದಂತೆ ಮತ್ತಿತರ ಪ್ರದೇಶಗಳಲ್ಲಿ ಕಳೆದ ಎರಡು ವರ್ಷದ ಹಿಂದೆ ಮಳೆ ಕೊರತೆಯಿಂದಾಗಿ ತೆಂಗಿನ ಮರಗಳು ಒಣಗಿ ಹೋಗಿ ಇಳುವರಿ ಕುಂಠಿತ ಒಂದೆಡೆಯಾದರೆ, ಮತ್ತೊಂದೆಡೆ ನುಸಿ ಪೀಡೆ, ಕಾಂಡ ಕೊರೆತ ವ್ಯಾಪಕವಾಗಿ ಹರಡುತ್ತಿದ್ದು, ಇಳುವರಿಯಲ್ಲಿ ಭಾರೀ ಇಳಿಕೆಯಾಗಿದೆ. ಇದರ ಜೊತೆಗೆ ತೆಂಗು ಪ್ರದೇಶವನ್ನು ಅಡಿಕೆ ಗಿಡಗಳು ಆವರಿಸಿದ್ದು, ರೈತರು ಹೆಚ್ಚಾಗಿ ಅಡಕೆ ಗಿಡಗಳತ್ತ ಒಲವು ತೋರುತ್ತಿದ್ದು, ತೆಂಗಿನ ಗಿಡಗಳಿಗೆ ಆರೈಕೆ ಮಾಡದ ಕಾರಣ ಇಳುವರಿ ಕುಂಠಿತವಾಗಿದೆ. ಈ

ಇಳುವರಿ ಭಾರಿ ಕುಂಠಿತ

ಸಾಲುಸಾಲು ಹಬ್ಬಗಳಿಗೆ ತೆಂಗಿನಕಾಯಿ ಅನಿವಾರ್ಯವಾಗಿದ್ದು, ಬೇಡಿಕೆ ಹೆಚ್ಚಾಗಿದೆ. ಇಳುವರಿ ಕುಂಠಿತವಾಗಿ, ಬೇಡಿಕೆ ಹೆಚ್ಚುತ್ತಲೇ ಇದೆ. ನಿರೀಕ್ಷಿತ ಪ್ರಮಾಣದಲ್ಲಿ ಮಾರುಕಟ್ಟೆಗೆ ತೆಂಗಿನಕಾಯಿ ಬಾರದಿರುವುದರಿಂದ ಸಾಮಾನ್ಯವಾಗಿ ಬೆಲೆ ಹೆಚ್ಚಳವಾಗಿದೆ.

■ ರಾಜು, ತೆಂಗಿನಕಾಯಿ ವ್ಯಾಪಾರಿ



ಹಿನ್ನೆಲೆಯಲ್ಲಿ ಇತಿಹಾಸದಲ್ಲೇ ಮೊದಲ ಬಾರಿಗೆ ತೆಂಗಿನಕಾಯಿ, ಎಳನೀರು, ಕೊಬ್ಬರಿ ಹಾಗೂ ಚಿಪ್ಪಿಗೆ ಭಾರೀ ಬೆಲೆ ಬಂದಿದ್ದು, ಒಂದೆಡೆ ಇಳುವರಿ ಇಲ್ಲದೆ ಬೆಲೆ ಹೆಚ್ಚಳವಾಗಿದೆ. ಇದರಿಂದ ರೈತರು ಕೊಂಚ ಖುಷಿ ಪಡುವಂತಾಗಿದೆ.

01-08-2025
Samyuktha Kar. Pg.05

Spike in maize cultivation, 'reduced' supply trigger urea shortage

Agri dept recommends 50 kg per acre

SHRINIDHI R
DHARWAD, DHNS

Unexpected heavy rains coupled with expansion of area under maize cultivation has resulted in urea shortage during kharif season this year. The change in Centre's policy on supply of the fertiliser added to the woes. Karnataka is facing urea shortage in kharif season for the first time in recent years.

Typically, the agriculture department anticipates cropping patterns and submits fertiliser indents well in advance, ensuring timely supply before the sowing season begins.

Agriculture department joint director Manjunath Antharvalli told *DH* that the area under maize cultivation had expanded by over 2 lakh hectares this season. "Since maize requires substantial urea, sudden increase in acreage led to a sharp surge in demand," he said.

"With fields still moist due to ongoing rainfall, farmers fear crop damage if adequate fertiliser is not provided. While the department recommends one 50-kg urea bag per acre, many farmers are using three to four bags to safeguard their crops," he said.

Despite efforts by the department to promote alternatives like nano-fertilisers, farmers are adamant about their demand for urea.



Farmers stand in a queue in front of a fertiliser shop in Kundgol taluk of Dharwad district for procuring urea. DH FILE PHOTO

Agriculture officials said green gram was initially the most preferred crop, with a target of over six to seven lakh hectares.

Benefiting from an early monsoon, farmers had begun sowing in the last week of May. However, torrential rains between June 11 and 14 destroyed many green gram fields, prompting resowing in over 20 taluks.

As a second crop, many farmers shifted to maize, a fertiliser-intensive crop, further adding to urea demand.

Over the past week, several taluks, especially in northern and central Karnataka, witnessed widespread protests by farmers demanding urgent supply of urea.

In taluks like Kalghatagi, Kundgol, Bagalkot, Gadag, Nargund, Holalkere, Chitradurga, and Navalgund, farmers attempted to picket Raitha Samparka Kendras, warning of intensified protests if the government fails to meet the demand.

Agriculture Minister N Chaluvarayaswamy acknowledged the crisis and cited changes in the union government's fertiliser allocation policy as a major factor. Over the last three years, fertilisers, including urea, were supplied based solely on demand. However, this year, the Centre considered existing opening stock in its allocation, reducing the total quantity supplied to state.

"For this kharif season, the state sought 12.95 lakh metric tonnes (MT) of urea, but the Centre approved only 11.17 lakh MT," he said.

He said the department had written six letters since April to the Union Ministry of Chemicals and Fertilisers, urging adequate supply of urea.

Early water release

"Early release of water from major reservoirs like Tungabhadra, Krishna and Cauvery to command areas advanced transplanting activities, intensifying fertiliser needs," he said.

The minister appealed to the Centre to urgently supply the remaining 1.45 lakh MT of urea without adjusting opening stock.

01-08-2025
Deccan Herald Pg.04

ಭತ್ತ ಬಿತ್ತನೆಗೆ ಡ್ರೋನ್ ವ್ಯಾಪಕ ಬಳಕೆ

ಕೃಷಿಕರ ಬವಣೆ ಪರಿಹಾರಕ್ಕೆ ಕೇರಳ ಕೃಷಿ ವಿಶ್ವವಿದ್ಯಾಲಯದ ವಿನೂತನ ಉಪಕ್ರಮ

■ ಕೆ.ಗಂಗಾಧರ್ ಯಾದವ್ ಕಾನಗೋಡು
gangadhar.korekkana@timesofindia.com

ಯಂತ್ರಗಳ ಮೂಲಕ ಭತ್ತ ಗದ್ದೆಗಳನ್ನು ಸಿದ್ಧಪಡಿಸಬಹುದು. ಅಲ್ಲದೇ, ಇನ್ನು ಮುಂದೆ ಭತ್ತ ಬಿತ್ತಲು ಡ್ರೋನ್‌ಗಳನ್ನು ಬಳಸಬಹುದಾಗಿದೆ. ಈ ಪರೀಕ್ಷೆಯನ್ನು ಕೇರಳ ಕೃಷಿ ವಿಶ್ವವಿದ್ಯಾಲಯವು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಬೀಜ ಬಿತ್ತನೆಯಲ್ಲೂ ಯಾಂತ್ರೀಕರಣವಾಗುವುದರೊಂದಿಗೆ ಹೊಸ ಕ್ರಾಂತಿಯಾಗಿದೆ.

ಕೇರಳದ ಕೆಲವು ಜಿಲ್ಲೆಗಳಲ್ಲಿ ಪ್ರಧಾನವಾಗಿ ಆಲಪ್ಪುಯ, ಕೊಟ್ಟಾಯಂ, ತ್ರಿಶೂರ್ ಹಾಗೂ ಎರ್ನಾಕುಳಂ ಜಿಲ್ಲೆಗಳಲ್ಲಿನ ಪ್ರದೇಶಗಳಲ್ಲಿ ಭತ್ತ ಬಿತ್ತನೆಯಲ್ಲಿ ಡ್ರೋನ್‌ಗಳು ಫಲಪ್ರದವಾಗಿವೆ. ಈ ಗದ್ದೆ ಬಯಲುಗಳಲ್ಲಿ ನೀರು ಹಾಗೂ ಕೆಸರು ತುಂಬಿಕೊಂಡಿರುವ ಕಾರಣ ಕೃಷಿಕರಿಗೆ ಭತ್ತದ ಬೀಜ ಬಿತ್ತಲು ಕಷ್ಟವಾಗುತ್ತಿತ್ತು. ಇದಕ್ಕೊಂದು ಪರಿಹಾರ ಕಂಡುಕೊಳ್ಳಲಾಗಿದೆ.

ಕೇರಳ ಕೃಷಿ ವಿಶ್ವವಿದ್ಯಾಲಯವು ವಿಶ್ವಬ್ಯಾಂಕ್‌ನಿಂದ ಧನ ಸಹಾಯ ಪಡೆದ ಯೋಜನೆಯಲ್ಲಿ ಡ್ರೋನ್ ತಂತ್ರಜ್ಞಾನವನ್ನು ಬಳಸಲಾಗಿದೆ. ವಿಶ್ವವಿದ್ಯಾಲಯದ ಇಂಕ್ಯುಬೇಷನ್ ಸೆಂಟರ್‌ಗಳನ್ನು ಬಳಸಿಕೊಳ್ಳುವ ಹೊಸ ಪೀಳಿಗೆಯ ಸ್ಟಾರ್ಟಪ್ ಆಗಿರುವ ಕೃಷಿ ವಿಶ್ವವಿದ್ಯಾಲಯ, ಕೃಷಿ ಮತ್ತು ವ್ಯೂಸಿಲೇಜ್ ಇನ್ನೋವೇಶನ್ ಇಲಾಖೆ ಜಂಟಿಯಾಗಿ ಈ ಉಪಕ್ರಮ ಕೈಗೊಂಡಿದೆ.



ಭತ್ತದ ಕೃಷಿ ಕ್ಷೇತ್ರದಲ್ಲಿ ಕೃಷಿಕರ ಕೆಲಸದ ಹೊರೆ ಕಡಿಮೆ ಮಾಡಲು ವಿಶ್ವವಿದ್ಯಾಲಯದ ಪ್ರಯತ್ನಗಳ ಭಾಗವಾಗಿ ಬೀಜಗಳನ್ನು ಬಿತ್ತಲು ಡ್ರೋನ್‌ಗಳನ್ನು ಈ ಪ್ರದೇಶದಲ್ಲಿ ಪರೀಕ್ಷಿಸಲಾಗುತ್ತಿದೆ.

-ಡಾ.ಕೆ.ಪಿ.ಸುಧೀರ್ ಮುಖ್ಯಸ್ಥ ಕೃಷಿ ವಿವಿ ವ್ಯವಹಾರ ಇಂಕ್ಯುಬೇಟರ್.

ಡ್ರೋನ್ ಕಾರ್ಯಾಚರಣೆ ಹೇಗೆ?: ಪ್ರಾಯೋಗಿಕವಾಗಿ ಸುಮಾರು 10 ಕೆಲೋ ಗ್ರಾಂನಷ್ಟು ಭತ್ತದ ಬೀಜ ಬಿತ್ತುವ ಸಾಮರ್ಥ್ಯ ಹೊಂದಿರುವ ಡ್ರೋನ್ ಬಳಸಲಾಗಿದೆ. ಮೊಳಕೆ ಹಂತದಲ್ಲಿರುವ ಬೀಜಗಳು ಡ್ರೋನ್ ತಂತ್ರಜ್ಞಾನದಲ್ಲಿ ಹೆಚ್ಚು ಯೋಗ್ಯವಾಗಿವೆ. ಒಂದು ಎಕರೆ ಗದ್ದೆಯಲ್ಲಿ ಬೀಜ ಬಿತ್ತಲು ಡ್ರೋನ್ 20ರಿಂದ 25 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ಒಂದು ಎಕರೆ ಜಾಗದಲ್ಲಿ ಸಾಂಪ್ರದಾಯಿಕ ಬೀಜ ಬಿತ್ತನೆಗೆ ಹೋಲಿಸಿದರೆ ಡ್ರೋನ್ ಮೂಲಕ ಬಿತ್ತನೆ ಕಾರ್ಯದಲ್ಲಿ 10 ಕೆ.ಜಿಗಳಷ್ಟು ಉಳಸಬಹುದು. ಡ್ರೋನ್ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಸಮಯಾವಧಿಯನ್ನು ಮತ್ತಷ್ಟು ಕಡಿಮೆ ಮಾಡಬಹುದಾಗಿದೆ. ಹೆಚ್ಚು ಸಾಮರ್ಥ್ಯದ ಡ್ರೋನ್ ಅವಿಷ್ಕಾರಕ್ಕಾಗಿ ಪ್ರಯೋಗಗಳು ನಡೆಯುತ್ತಿವೆ.

ಡ್ರೋನ್ ಬಳಕೆ ಎಲ್ಲಿ?: ಕೇರಳದ ಅತಿ ಹೆಚ್ಚು ಭತ್ತದ ಕೃಷಿ ಹೊಂದಿರುವ ಕುಟ್ಟನಾಡು ಪ್ರದೇಶದಲ್ಲಿ ಇದರ ಪ್ರಯೋಗ ಯಶಸ್ವಿಯಾಗಿ ನಡೆದಿದೆ. ಕುಟ್ಟನಾಡು ಸೇರಿದಂತೆ ಕೃಷಿ ಪ್ರದೇಶಗಳಲ್ಲಿನ ಪ್ರಯೋಗಗಳ ಯಶಸ್ಸಿನ ಆಧಾರದ ಮೇಲೆ ಚೆಂಬಕಸ್ಸೆರಿಯಲ್ಲಿ 110 ಎಕರೆ ಭತ್ತದ ಗದ್ದೆಗಳಲ್ಲಿ ಡ್ರೋನ್ ಮೂಲಕ ಬೀಜ ಬಿತ್ತನೆ ಮಾಡಲಾಗಿದೆ. ವೈಕಂ ಕರಿನೀಲ ಕರ್ಷಕ ಸಮಿತಿ ನೇತೃತ್ವದಲ್ಲಿ ಈ ರೀತಿಯ ಕೃಷಿ ನಡೆಸಲಾಗುತ್ತಿದೆ.

ಈ ಭಾಗದಲ್ಲಿ ನಿರಂತರ ಮಳೆಯಿಂದಾಗಿ ಡ್ರೋನ್ ಹಲವು ಅಡತಡೆಗಳನ್ನು ಎದುರಿಸಿದರೂ ಬೀಜ ಬಿತ್ತನೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಡ್ರೋನ್ ಬಳಸಿ ಬಿತ್ತನೆ ಮಾಡುವಾಗ ಭತ್ತದ ಬೀಜಗಳನ್ನು ನಿಖರ ದೂರದಲ್ಲಿ ಬಿತ್ತಲಾಗುತ್ತದೆ. ಇದರಿಂದಾಗಿ ಸೀಮಿತ ಪ್ರಮಾಣದ ಬೀಜಗಳನ್ನು ಬಳಸಿ ಭತ್ತ ಹುರುಪಿನಿಂದ ಬೆಳೆಯಲು ಸಾಧ್ಯವಾಗುವುದು.

01-08-2025
Vijaya Kar. Pg.04

Karnataka Food Safety and Drug Administration shifts focus to trans fat reduction in cooking oil

The Hindu Bureau
BENGALURU

After a crackdown on food additives, the State Food Safety and Drug Administration has now turned its attention towards tackling trans fat in cooking oil, with a focus on improving public health and food safety.

In a video conference, chaired by the Commissioner of Food Safety and Drug Administration on Wednesday, key stakeholders, including district officials, hotel and bakery association representatives, RUCO (Repurpose Used Cooking Oil) agency heads, and members of the Karnataka State Bio-Diesel Development Board, gathered to discuss a multi-pronged strategy.



All cooking oil manufacturers have been directed to ensure strict hygiene in production, labelling as per FSSAI norms, and mandatory fortification of the oil with Vitamins A and D.

The commissioner directed all cooking oil manufacturers to ensure strict hygiene in production, proper labelling per FSSAI norms, and mandatory fortification of cooking oil with Vitamin A and D. Manufacturers were also advised to conduct oil quality analysis every six months to ensure compliance.

U.S. Vishal Rao, oncologist and head and neck surgeon at HCG Cancer Centre, joined the meeting virtually and stressed the importance of using cooking oils with reduced trans fat.

He highlighted the link between trans fat and non-communicable diseases such as heart disease and cancer, urging the food industry to adopt healthier practices.

RUCO agency representatives informed the commissioner that 32.68 lakh litres of used cooking oil had been collected during 2024-25 and 2025-26.

Agencies were encouraged to ramp up collection efforts and supply the used oil to authorised bio-diesel units.

Strict instructions were issued to hotel and bakery operators to hand over used oil to registered RUCO agencies to prevent its reuse – a practice that poses serious health risks.

The food safety commissioner reiterated the administration's commitment to building a safer and healthier food ecosystem in Karnataka, with the reduction of trans fat and proper oil disposal emerging as key priorities.

01-08-2025
The Hindu Pg.07